॥ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವಾಂತರ್ಗತ

ಶ್ರೀಶ್ರೀನಿವಾಸಾಯನಮಃ ॥

ಶ್ರೀವಿಜಯದಾಸರಿಂದ ರಚಿಸಲ್ಪಟ್ಟ

# *ವೇಂಕಟಾಚಲ ಪರ್ವತದ ಮಹಿಮೆ*

ಸುಳಾದಿಗಳು

ರಾಗ : ಭೈರವಿ ತಾಳ : ಧ್ರುವ

ಶ್ರೀನಿವಾಸನ ನಿಧಿಯಾನು ಬಣ್ಣಿಸಲಿನ್ನು।
ನಾನೆಲ್ಲಿ ಇದರ ಸಮಾನಧಿಕವಾದ।
ಭೂನಿತಂಬಿನಿಯೊಳು ಕಾಣೆನೊ ಅರಸಲು।
ಆ ನಿರ್ಜರರನುದಿನ ಎಣಿಸೆಣಿಸಿ।
ವಾಣಿಬರದೆ ಗುಣವಾನು ತೋರದೆ ನಿತ್ಯ।
ಈ ನಿಧಿಯಾ ಪುಣ್ಯಶ್ರೇಣಿಯನು।
ಧೇನಿಸಲಾರದೆ ಮೌನವಾಗುವರಯ್ಯಾ।
ಹೀನಮಾನವಮತಿ ನಾನು ನುಡಿದ ಫಲ।
ಚಾಣೂರಾರಿ ತಂಗ ವಿಜಯವಿಠ್ಠಲರೇಯಾ।
ನೀನೆ ಬಲ್ಲವನಿದರ ಆನಂದವೈಭವ ॥ 1 ॥

ತಾಳ ಮಟ್ಟ

ರತುನ ಸಾನುವಿನ ಸುತಗೆ ವೇಂಕಟಪ-
ರ್ವತ ವೆಂಬಭಿದಾನಾ ಹಿತವಾಗಿ ಇರಲೂ।
ಗತಶ್ರವಣ ಮಾರುತದೇವಗೆ ಬಿಡದೆ।
ಪ್ರತಿವಾದಗಳಾಗೆ ಖತಿಯವನಂತೆ ಮಾ।
ರುತಿಪತಿ ಬೀಸಾಲು ಗತಿತಪ್ಪಿ ಉರಗ।

ಪತಿ ಪರ್ವತಸಹಿತ ಕ್ಷಿತಿಯೊಳಗೀಭ।
ರತಖಂಡದೊಳಗೆ ದ್ಯುತಿಯಾಗಿ ಪೊಳವುತ್ತ।
ರತಿಪತಿಪಿತ ಸಿರಿವಿಜಯವಿಠ್ಠಲನ್ನ
ನುತಿಸಿ ನಿರಂತರ ಸ್ತುತಿಸಿ ಕರವ ಮುಗಿಯೆ ॥ 2 ॥

ತಾಳ : ರೂಪಕ

ಕುಂಡಲಿ ಈಪರಿ ಕೊಂಡಾಡಿ ದೈನ್ಯದಲಿ।
ದಂಡಪ್ರಣಾಮದಿಂದ ಅಂಡಜಗಮನನ್ನ।
ತಂಡತಂಡದ ಭಕುತಿ ಖಂಡವಾಗದಂತೆ।
ಪುಂಡರೀಕಾಕ್ಷನು ಕಂಡು ವೇಗದಲ್ಲಿ।
ಅಂಡಲಿಯದಂತೆ ವಿಜಯವಿಠ್ಠಲ ತನ್ನಾ।
ತೊಂಡವಗೆ ವರವ ಮುಂಕೊಡು ಪಾಲಿಸಿದಾ ॥ 3 ॥

ತಾಳ : ಝಂಪೆ

ವರವಿತ್ತು ಭಕುತಗೆ ಪರಿಹರಿಸಿ ಭಯವನ್ನು।
ಸ್ಥಿರವಾಗಿ ನಿಂದ ನೀ ಗಿರಿಯಮಧ್ಯೆ।
ಸುರರಿಂದ ವಾಲಗವ ಭರದಿಂದ ಕೈಕೊಳುತ।
ಮೆರೆದು ಪೆಸರಾಗಿ ತ್ರೈಧರಿಯಾವೊಳಗೆ।
ಶರಣೆಂದವರ ಏನಾದರಶರೆಯನು ಬಿಡಿಸಿ।
ಪೊರೆವ ಪರಿಪರಿಯಲ್ಲಿ ಪರಮ ಪುರುಷ।
ತಿರುವೆಂಗಳೇಶ ತಿರಪತಿ ವಿಜಯವಿಠ್ಠಲ।
ಜರಾಮರಣರಹಿತ ಭೂಸುರವೃತ ದಾತಾ ॥ 4 ॥

ತಾಳ : ತ್ರಿವಿಡಿ

ಈ ಗಿರಿಯಲ್ಲಿ ತಪಸು ವೇಗದಿಂದಲಿ ನೆಸಗಿ।
ಆ ಗಂಧಾವಾಹನ್ನಮಿಗೆ ಸ್ತುತಿಸಲಾಗಿ।
ತಾ ಗುಣದಲಿ ಪ್ರಥಮಾಂಗದನೆನಿಸಿದ ಸಾಗರಶಯನಗೆ।

ಅಗಸ್ತ್ಯಮುನಿ ಇದರ ಆಗಮ ಬಲ್ಲಾನು ।
ಭೂಗೋಳದೊಳಗನುರಾಗದಿಂದಲಿ ಮಿಕ್ಕ ।
ಯೋಗಿಗಳೆಲ್ಲಾ ಭೋಗಿಸುತಿಪ್ಪರು ।
ಭೋಗಿಶಯನ ವಿಜಯವಿಠ್ಠಲನ್ನ ।
ಭೋಗವೇನು ಪೇಳಲಿ ಭೋಗಾಗಿರಿಯಲ್ಲಿ ॥ 5 ॥

ತಾಳ : ಅಟ್ಟ

ಐದುಯೋಜನವಿಸ್ತಾರದ ಗಿರಿಯನು ।
ವೈದಿಕದಿಂದಲಿ ಸುತ್ತ ಪ್ರದಕ್ಷಿಣೆ ।
ಐದೊಂದು ಸಾರಿಗೆ ತಿರುಗಿ ಭಕುತಿಯಲ್ಲಿ ।
ಐದುಹತ್ತುಹದಿನಾರುಕೋಟಿತೀರ್ಥ ಹಾ-
ಯಿದು ನೆನೆಸುವಂಥ ಮೈದೆಗೆಯದ ನರಕೊ ।
ಯಿದು ಹಾಕುವನಯ್ಯಾ ಮೈದುಗುಡದ ಪಾಶಾ ।
ಐದುವಿರಹಿತ ವಿಜಯವಿಠ್ಠಲನ್ನ ।
ಕೈದಣಿಸಿ ಪೂಜಿಸಿ ಪೂಜಿಸಿ ಐದಿದವ ಸುಮತಿ ॥ 6 ॥

ತಾಳ : ಆದಿ

ಸ್ವಾಮಿಪುಷ್ಕರಣಿ ಸ್ನಾನ ಈ ಮಹತ್ಮನ ದರ್ಶನ ।
ಈ ಮಹಿಯೊಳಗೊಮ್ಮೆ ನೇಮದಲ್ಲಿ ಮಾಡಿದವನು ।
ವ್ಯೋಮಾಭೂಪಾತಾಳಾದೊಳಗೆ ನಿ-
ಸ್ಸೀಮನಾಗಿ ಚರಿಸಿ ನಿಜಕಾಮಿತಾರ್ಥವ ಬೇಡದೆ ।
ಕಾಮಿಸಿ ಹರಿಯ ಪಾದಾ ।
ಪಾಮರನಾಗದೆ ನಮ್ಮ ವಿಜಯವಿಠ್ಠಲನ್ನ ।
ನಾಮವನೆ ಉಂಡು ನಿಜಧಾಮಾದಲ್ಲಿ ಸೇರುವನು ॥ 7 ॥

ಜತೆ

ವೇಂಕಟೇಶನೆ ನಮೊ ವೇಂಕಟೇಶನೆ ನಮೊ
ಸಂಕಟಪರಿಹರಿಸೊ ವಿಜಯವಿಠ್ಠಲರೇಯಾ ॥ 8 ॥

## ಸುಳಾದಿ - 2

ರಾಗ : ಮುಕಾರಿ ತಾಳ : ಧ್ರುವ

ಧನ್ಯನಾದೆನು ಇಂದೀಪುಣ್ಯಗಿರಿಯ ತಾ-।
ರುಣ್ಯಭಕುತಿಯಲ್ಲಿಂದ ದೈನ್ಯಾಮನದಲ್ಲಿ ಕಂಡೆ।
ಅನ್ಯಾಯಗೊಳಿಸುವ ಮನ್ಯುಪಾಪವೆಂಬಾ -
ರಣ್ಯಕ್ಕೆ ಹವ್ಯವಾಹನ್ನ ತೋರುತಿದೆ।
ಗಣ್ಯವೆ ಇದರ ಲಾವಣ್ಯವರೇಣ್ಯವ।
ಬಣ್ಣಿಸಲರಿದು ಹಿರಣ್ಯಗರ್ಭಗಾದರು।
ಕನ್ಯಾ ಧಾರುಣಿ ಹಿರಣ್ಯ ತುಲಾಭಾರಾ।
ಅನ್ನಾ ದಾನಾದಿಗಳು ಅನ್ಯೋನ್ಯ ಮಾಡಲು।
ಅನ್ಯಥಾ ಈ ಯಾತ್ರಿ ಪುಣ್ಯಫಲಕ್ಕೆ ಸಾ-
ಮಾನ್ಯವೆನಿಸುವಾದು ಸುಜನರು ಲಾಲಿಪದು।
ಕನ್ಯಾಪತಿಯು ಕಾರುಣ್ಯಮೂರುತಿ ಪಾಂಚ-
ಜನ್ಯಪಾಣಿ ನಮ್ಮ ವಿಜಯವಿಠ್ಠಲನು ಶಾ-
ರಣ್ಯರಿಗೆ ಅನುಗುಣ್ಯಾ ನಡಿಸುವಾ ॥ 1 ॥

ತಾಳ : ಮಟ್ಟ

ಸಪ್ತಪೆಡೆಗಳು ತಪ್ತಕಾಂಚನದಂತೆ।
ಸಪ್ತವನನಿಧಿ ಸಪ್ತದ್ವೀಪದ ಮಧ್ಯ
ಸಪ್ತೆರಡುಲೋಕ ವ್ಯಾಪ್ತವಾಗಿ ಕಿರಣ।

ಸಪ್ತಾಶ್ವನ ತೆರದಿ ದೀಪ್ತವಾಗಿದೆ ಸರ್ವ -
ತೃಪ್ತ ಮೇಲುಗಿರಿ ವಿಜಯವಿಠ್ಠಲನಿಗೆ।
ಆಪ್ತನಾಗಲು ಫಲಪ್ರಾಪ್ತಿಯಾಯಿತು ಬಿಡದೆ II 2 II

ತಾಳ : ತ್ರಿವಿಡಿ

ಶೃಂಗವೆ ವಜ್ರಾನು ರಂಗು ಮಾಣಿಕದಂತೆ।
ಕಂಗಳಿಗೆ ಬಿಡದೆ ಕಂಗೊಳಿಸುತಿದೆ।
ಸಿಂಗ ಶಾರ್ದೂಲ ಸಾರಂಗ ಮನ ಬೊಗು ತು -
ರಂಗ ವರಹ ವೃಕ ಮಾತಂಗ ಭಲ್ಲೂಕ ಪ್ಲಾ।
ವಂಗ ಮಾರ್ಜಾಲ ವಿಹಂಗಾನುಶುಕಪಿಕ ಭೂ -
ಜಂಗಮ ನಾನಾಕಾಭೃಂಗ ಪತಂಗಾದಿ ಸಂಘವು ಚೀರುತ್ತ
ಸಂಗದ್ಯಾಡುತಾ ಶೃಂಗಾರದಲಿ ಪೊಳೆಯೆ।
ಮಂಗಳಾಂಗಾ ತುರಂಗವದನ ಭಕ್ತರಂತ-
ರಂಗದೊಡಿಯಾ ವಿಜಯವಿಠ್ಠಲರೇಯಾ।
ವೆಂಗಳ ನಾಡುವಾ ಭಂಗಾರತಿರುಗಿರಿಯಾ II 3 II

ತಾಳ : ಅಟ್ಟ

ಸುರರು ಗಂಧರ್ವರು ಉರಗ ಯಕ್ಷ ಸಿದ್ಧ-
ಗರುಡ ಕಿಂಪುರುಷ ಕಿನ್ನರರು ಗುಹ್ಯಕರು ಸಾ-
ಧ್ಯರು ತುಂಬುರಾದಿ ನಿಕರವಲ್ಲಿಗಲ್ಲಿಗೆ।
ವರತಪಸಿಗಳಾಗಿ ಗಿರಿಯ ತಪ್ಪಲಲೀ।
ಗರುಡಾಸನ ನಮ್ಮ ವಿಜಯವಿಠ್ಠಲನ್ನ।
ಸ್ಮರಣೆ ಮಾಡುತ ಸಂಚರಿಪುದು ಕಂಡೆ II 4 II

ತಾಳ : ಆದಿ

ಶಿಲೆಯೆ ಸಾಲಿಗ್ರಾಮ ಹೊಳಲೆ ಸುದರುಶನ।
ಥಳಥಳಿಸುವ ವರ್ನಾಮಳಲೆ ಚಕ್ರಾಂಕಿತ।

ಇಳೆಯೊಳಗಿದೆ ನಿಶ್ಚಲವೈಕುಂಠನಗರ।
ಸಲೆ ಶ್ವೇತದ್ವೀಪ ಇದೆ ಪೊಳೆವಾನಂತಾಸನ-
ಸ್ಥಳವೆಂದು ಉತ್ತಮರು ತಿಳಿದು ಮನ್ನಿಸುವರು।
ಒಲಿನೆ ನಾಮಾ ನಮ್ಮ ವಿಜಯವಿಠ್ಠಲನ್ನ।
ಒಲಿಸಿ ಭಜಿಸುವಾರು ಜಲಜಗರ್ಭಾದಿಗಳು ॥ 5 ॥

ಜತೆ

ವರಗಿರಿಯ ಯಾತ್ರಿ ಮನಮುಟ್ಟಿ ಮಾಡಲು
ವರವೀವ ಪರನಾಮಾ ವಿಜಯವಿಠ್ಠಲ ತಿಮ್ಮಾ ॥ 6 ॥

## ಸುಳಾದಿ - 3

ರಾಗ - ಭೈರವಿ ತಾಳ - ಧ್ರುವ

ಪುಷ್ಕರಾದ್ರಿಯ ನೋಡಿ ಪುಣ್ಯವಂತರ ಕೂಡಿ।
ದುಷ್ಕರ್ಮಗಳ ಅಳಿದು ದುರ್ಜನ ಸಂಗ ಹಳಿದು।
ನಿಷ್ಕಾಮ ವರವೆ ಉಂಟು ನಿತ್ಯಾಮುಕ್ತಿಗೆ ಗಂಟು।
ದುಷ್ಕಾಲಾ ನಿಮಗಿಲ್ಲ ದುರ್ಲಭವೆನಿಸಲ್ಲಾ।
ನಿಷ್ಕಂಟುಕರಾಗಿ ನಿರಯ ಗೆದ್ದು ಚನ್ನಾಗಿ।
ಪುಷ್ಕರಾ ಪಿಡಿದು ಸತ್ಪುಣ್ಯಾರ ಕ್ರಮ ತಿಳಿದು।
ಪುಷ್ಕರಾದಿ ಕ್ಷೇತ್ರ ಎಂಟರೊಳಗೆ ಇದು।
ಪುಷ್ಕರಜಾಪ್ರಾನಂತೆ ಧರೆಯೊಳು ಒಪ್ಪುತಿದೆ।
ಪುಷ್ಕರಾದಿದ್ವೀಪಾ ತಿರುಗಿದ ಪಲವು ನ-
ಮಸ್ಕಾರ ಒಂದೇ ಪ್ರದಕ್ಷಿಣೆಯಿಂದ ತಂದೀವದು।
ಪುಷ್ಕರಾಕ್ಷಾ ತಿಮ್ಮಾ ವಿಜಯವಿಠ್ಠಲ ಒಡೆಯ।
ಪುಷ್ಕರಣಿಯ ಮತಿಪುಷ್ಕಳವಾಗಿ ಕೊಡುವಾ ॥ 1 ॥

ತಾಳ : ಮಟ್ಟ

ಇದೇ ವಾರಣಾಸಿ ಉದಧಿಬಂಧನಾ ।
ಇದೇ ದ್ವಾರಕಾಪುರಿ ಪದುಮನಾಭಾ ।
ಇದೇ ಗಯಾ ಪ್ರಯಾಗಾ ಯದುಕುಲಪತಿಕ್ಷೇತ್ರಾ ।
ಇದೇ ರಾಮನ ನಗರಿ ಮಧುರಾ ಗೋಕುಲಾ ।
ಇದೇ ಕುಂಜಗಿರಿ ಸದಮಲ ಕುರುಕ್ಷೇತ್ರ ।
ಇದೇ ಮಾಯಾ ಪಡುವಣಾಉದಧಿತೀರದಪುರ ।
ಇದೇ ಸಕಲಕ್ಷೇತ್ರ ಇದೇ ನಿರ್ಮಲಯಾತ್ರಾ ।
ಇದಕೆ ಅಧಿಕವಿಲ್ಲ ಇದಕೆ ಸಮಾನವಿಲ್ಲ ।
ಇದೇ ನಿರ್ವಾಣಕೆ ಮೊದಲು ಸೋಪಾನವೋ ।
ಇದರಿಂದಾದಫಲ ಒದಗದು ಮತ್ತೆಲ್ಲಿ ।
ಪದುಮಗರ್ಭನೈಯ್ಯಾ ವಿಜಯವಿಠ್ಠಲ ತಿಮ್ಮಾ ।
ಹದುಳವ ಕೊಡುವನು ಪದೋಪದಿಗೆ ನೆನೆಸೆ ॥ 2 ॥

ತಾಳ : ತ್ರಿವಿಡಿ

ಕೃತಯುಗದೊಳು ಇದೇ ವೈಕುಂಠವೆನಿಸೋದು ।
ತ್ರೇತಾಯುಗದೊಳು ಅನಂತಾಸನ ।
ಅತಿಶಯ ದ್ವಾಪರದಲ್ಲಿ ಶ್ವೇತಪದ್ವೀಪ ।
ಚತುರಯುಗದಲ್ಲಿ ವರಗಿರಿಯೆ ಸಿದ್ಧ ।
ಮತಿವಂತರು ಇನಿತು ಪೂಜಿಪರು ಭಾ-
ರತಖಂಡಾದೊಳು ಏಕಾಭಕುತಿಯಲ್ಲಿ ।
ಕ್ರತು ಜಪ ತಪ ತೀರ್ಥಯಾತ್ರಿ ದಾನಾ ನಾನಾ-
ವ್ರತಗಳು ತತ್ತದ್ವಿಚಾರಾದಲ್ಲಿ ।
ಶತಕಲ್ಪ ಮಾಡಿ ಶ್ರೀಕೃಷ್ಣಗರ್ಪಿಸಿದವಗೆ ।
ಹಿತವಾಗುವದೊಮ್ಮೆ ಶೇಷಾದ್ರಿಯಾತ್ರಿ ದು-

ಮರ್ತಿಗಳಿಗಾದರು ನಿಷ್ಫಲವೊ ।
ಚತುರವೊಗನು ಇದರ ಮಹಿಮೆ ಎಣಿಸಿ ।
ಗತಿತಪ್ಪಿದವನಂತೆ ನಿಲ್ಲುವನು ।
ಕ್ಷಿತಿಯ ಮಾನ್ನವರಿಗೆ ಸಾಧ್ಯವೆ ಏಣಿಸಾಲು ।
ನುತಿಸಿಮಾತುರ ಪುಣ್ಯಪಡಕೊಂಬೋದು ।
ಪತಿತಪಾವನ ತಿಮ್ಮ ವಿಜಯವಿಠ್ಠಲ ಇಲ್ಲಿ ।
ಸತತ ನೆಲಸಿಯಿಪ್ಪ ತಿರುವೆಂಗಳೆನಿಸಿ ॥ 3 ॥

ತಾಳ : ಅಟ್ಟ

ಗಿರಿಯ ಶೃಂಗಾರವ ವಿವರಿಸುವರಾರಿನ್ನು ।
ಮಿರುಗುತಿದೆ ಪುಟಾ ಎರೆದ ಬಣ್ಣದ ಚಾಮೀ
ಕರದಂತೆ ಸುತ್ತಲು ಚರಿಸುವ ಮೃಗ ಜಲ-
ಚರ ಖಗತತಿ ವಿಸ್ತರವಾಗಿ ಒಂದೊಂದು ।
ಪರಿಪರಿವರ್ಣವು ತರು ಗಿರಿ ಫಲ ಬಳ್ಳಿ ಭರಿತವಾಗಿಪ್ಪವು ।
ಸರಸವಾಗಿದ್ದ ಹೊದರು ಗುಹೆ ಒಳ್ಳೆಪು -
ಷ್ಕರಣಿಗಳೆಲ್ಲಾ ಸುಂದರಶೃಂಗಗಳು ನೋಡೆ ।
ಮೆರವುತಿದೆ ಸುರ ಗರುಡ ಗಂಧರ್ವ ಕಿ-
ನ್ನರ ಸಿದ್ಧ ಸಾದ್ಯ ಕಿಂಪುರಷ ಯಕ್ಷ ವಿದ್ಯಾ -
ಧರ ಮನು ಮುನಿ ಭೂಸುರ ರಾಯರು ಎಲ್ಲ ।
ಚರಿಸುತಿಪ್ಪರು ಈ ಪರ್ವತದೆಡೆಯಲ್ಲಿ ।
ಪರಿಪರಿರೂಪವ ಧರಿಸಿಕೊಂಡು ಭಾ-
ಸುರವಿರಕುತಿಯಲ್ಲಿ ಸರಿಗಾಣೆ ಇಲ್ಲಿದ್ದ ।
ನರಗೆ ಭುವನದೊಳು ।
ಪರಿಪೂರ್ಣಗುಣಾಂಬುಧಿ ವಿಜಯವಿಠ್ಠಲ ತಿಮ್ಮಾ ।
ನಿರುತವೈಭವದಿಂದ ಹಿರಿದಾಗಿ ನಲಿವಾ ॥ 4 ॥

ತಾಳ : ಆದಿ

ಅನಂತಜನುಮಕೊಮ್ಮೆ ಆನಂದಗಿರಿಯ ಯಾತ್ರಿ ।
ಆನುಪೂರ್ವಕದಿಂದ ಮಾನವನು ಮಾಡಲು ।
ಜ್ಞಾನವೆ ಕೊಡುವದು ಜ್ಞಾನಾದ್ರಿ ಇದು ಕಾಣೊ ।
ಹೀನವಾಗಿದ್ದ ಪಾಪಕಾನನ ಸುಡುವದು ।
ಶ್ರೀನಿವಾಸನೆ ಕೃಪೆ ತಾನೆ ಮಾಡಿ ಅವನ ।
ಮಾಣದೆ ಪಾಲಿಸುವ ಈ ನಿಧಿಯಲಿ ಪಂ-
ಚಾನನದೇವತೆಗಳು ಜ್ಞಾನಾದಿಯಿಂದ ಮದ್ಯ-
ಪಾನಾದಿಪಾತಕವ ಹಾನಿಮಾಡಿಕೊಂಡು ನಿ-
ಧಾನರಾಗಿ ಒಪ್ಪಿದರು ಏನೆಂಬೆನಯ್ಯಾ ಇದರ ।
ಮೇಣಿಎವಿಚಿತ್ರಕ್ಕೆ ಪ್ರಾಣನಾಯಕ ತಿಮ್ಮಾ ವಿಜಯವಿಠ್ಠಲ ಸದಾ ।
ದಾನಿಗಳರಸನು ನೀ ಎನೆ ಸಾಕುವ ॥ 5 ॥

ಜತೆ

ಅಪ್ರತಿಯಾತ್ರೆ ಇದು ಕಂಡವರಿಗಾಗದು ।
ಸ್ವಪ್ರಕಾಶ ವಿಜಯವಿಠ್ಠಲ ವೆಂಕಟ ಬಲ್ಲ ॥

ದೇವರನಾಮ

ರಾಗ : ಶಂಕರಾಭರಣ ತಾಳ : ಅಟ್ಟ

ಇಕೋ ಈತ ವೇಂಕಟೇಶನು ಭವದ ।
ಸಿಕ್ಕು ಬಿಡಿಸಿ ನೆನೆದರಿಗೆ ಸಿಕ್ಕಿ ಮನದಿಂದಗಲದಿಪ್ಪ ॥ ಪಲ್ಲವಿ ॥
ತರುಣ ಅರುಣ ಕಿರಣ ಪೋಲುವ ।
ಚರಣ ಧರಣಿತರುಣಿ ಸ್ಮರಿಸೆ ।
ಕರುಣಗಡಲಾದರಣೆಯಿಂದ ಉದ್ಧರಣೆ ಮಾಡಿದ ಪರಣನೀತ ॥ 1 ॥
ಮಂಡೆಯ ಮಂಡನ ಕುಂಡಲಕಾಂತಿ ।

ಗಂಡಸ್ಥಳದಲಿ ಮೆರೆಯ ತುಲಸಿ-
ದಂಡೆ ಕೌಸ್ತುಭಭೂಷಣ ಕಾಪೆಂಡೆಯಿಟ್ಟ ನಂದನೀತ ॥ 2 ॥
ತಂಡುವಾಹನ ಆಖಂಡಲ ಇಕ್ಷ್ವಕೋ-
ದಂಡ ಪರಮೇಷ್ಠಿ ತೋಂಡರು ನಲಿದು ಕೊಂಡಾಡೆ ಚಂದಿರ-
ಮಂಡಲದೊಳು ಉದ್ದಂಡನಾಗಿ ಇಪ್ಪಾ ಪುಂಡದೈವನೀತ ॥ 3 ॥
ಪಂಜಿನ ಸಾಲು ಪರಂಜಳವಾದ್ಯ ವಿ-
ರಂಜಿಸಲು ಜ್ಞಾನಪುಂಜನಾರದ ಜಯ ಜಯ ಪೇಳಲು ।
ಕಂಜಲೋಚನ ನಿರಂಜನ ದಾನವಭಂಜನ ಈತಾ ॥ 4 ॥
ಕರೆದ ಜನಕೆ ಸುರಧೇನು ಈತ ।
ನಿರುತದಲ್ಲಿ ಪೊರೆವ ಭಕ್ತರ ।
ಕರಿಯ ಕಾಯ್ದ ವಿಜಯವಿಠ್ಠಲ ಪರಮಪುರುಷ ತಿರುಮಲನೀತ ॥ 5 ॥

॥ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವಾಂತರ್ಗತ
ಶ್ರೀಶ್ರೀನಿವಾಸಾರ್ಪಣಮಸ್ತು ॥